## 9. ಪಕ್ಷಾಂತರ ಪಿಡುಗು–ಸಮ್ಮಿಶ್ರ ಸರ್ಕಾರದ ಗೊಣಗು

ಪಕ್ಷಾಂತರದ ಪಿಡುಗು ನಮ್ಮ ರಾಜಕೀಯ ಜೀವನಕ್ಕೆ ಅಂಟಿಕೊಂಡಿದೆ. ಪಕ್ಷಾಂತರವಿಲ್ಲದೇ ರಾಜಕೀಯವಿಲ್ಲ ಎನ್ನುವಂತಾಗಿದೆ. ಪಕ್ಷಾಂತರ ಒಂದು ರಾಜಕೀಯ ಮೌಲ್ಯಗಳಿಗಾಗಿ ಆಗುವಂಥ ವಿಷಯವಲ್ಲ. ರಾಜಕೀಯ ಮೌಲ್ಯಗಳನ್ನು ಪರಿಪಾಲಿಸುವುದನ್ನು ರಾಜಕಾರಣಿಗಳು ಎಂದೋ ಗಾಳಿಗೆ ತೂರಿದ್ದಾರೆ. ಪಕ್ಷಾಂತರಗಳು ಹಣದ ಆಮಿಷಕ್ಕೆ ಒಳಗಾಗಿಯೋ ಅಥವಾ ಪದವಿ ಆಮಿಷಕ್ಕೆ ಒಳಗಾಗಿಯೇ ಆಗುತ್ತದೆಯೇ ವಿನಹ ಯಾವೊಬ್ಬ ರಾಜಕಾರಣಿಯು ತನ್ನ ರಾಜಕೀಯ ಮೌಲ್ಯಗಳನ್ನು ಬದಲಾಯಿಸಿಕೊಂಡ ಎಂಬುದಕ್ಕಾಗಿ ಅಲ್ಲ. ಸ್ವಾತಂತ್ರ್ಯನಂತರ ನಮ್ಮ ದೇಶವು ಪ್ರಜಾಪ್ರಭುತ್ವ ಗಣರಾಜ್ಯವಾಗಿ ಹೊರಹೊಮ್ಮಿತು. ನಮ್ಮ ದೇಶದ ಸ್ವಾತಂತ್ರ್ಯ ಬಂದ ಹೊಸತರಲ್ಲಿ ಬಹು ಪಕ್ಷದ ಆಳ್ವಿಕೆ ಅವಶ್ಯಕತೆ ಇರಲಿಲ್ಲ. ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಬಹು ಮತವನ್ನು ಸ್ಥಾಪಿಸುತ್ತಾ ಒಮ್ಮತದ ಪಕ್ಷವಾಗಿ ಹೊರಹೊಮ್ಮಿತು. ಆದರೆ ಈ ಪರಿಸ್ಥಿತಿ ಬಹುಕಾಲ ಉಳಿಯಲಿಲ್ಲ. 1967ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳ ನಂತರ ಚಿತ್ರ ಬದಲಾವಣೆಯಾಯಿತು. ಕಾಂಗ್ರೆಸ್ ಪಕ್ಷ ಅನೇಕ ರಾಜ್ಯಗಳಲ್ಲಿ ಬಹುಮತ ಗಳಿಸಲಾರದೇ ಹೋಯಿತು. ಆದರೆ ಇತರ ಯಾವ ಒಂದು ಪಕ್ಷವು ಬಹುಮತ ಗಳಿಸುವುದರಲ್ಲಿ ವಿಫಲವಾಯಿತು. ಇದುವರೆವಿಗೂ ವಿರೋಧಪಕ್ಷವಾಗಿದ್ದ ಅನೇಕ ಪಕ್ಷಗಳು ಒಟ್ಟುಗೂಡಿ ಕಿಚಡಿ ಸರ್ಕಾರಗಳನ್ನು ರಚಿಸಲು ಮುಂದೆ ಬಂದವು. ಈ ಬೆಳವಣಿಗೆಯೊಂದಿಗೆ ಶುರುವಾಯಿತು ಸಮ್ಮಿಶ್ರ ಸರ್ಕಾರಗಳು ಮತ್ತು ಪಕ್ಷಾಂತರದ ಆವಾಂತರ.

ಹರಿಯಾಣ ರಾಜ್ಯದಲ್ಲಿ ಶಾಸಕನಾಗಿ ಚುನಾಯಿತನಾಗಿದ್ದ ಗಯಾಲಾಲ್ ಎಂಬ ಶಾಸಕನು 1967ನೇ ವರ್ಷದಲ್ಲಿ ಒಂದೇ ದಿನ 3 ಸಲ ಪಕ್ಷ ಬದಲಾಯಿಸಿದನು. ಇದರೊಂದಿಗೆ ಶುರುವಾಯಿತು ಆಯಾರಾಂ ಗಯಾರಾಂ ಪರಿಪಾಠ. ಪಕ್ಷಾಂತರದ ಪಿಡುಗಿನ ಆವಾಂತರ ಮನವರಿಕೆಯಾಯಿತು. ಇದನ್ನು ತಡೆಗಟ್ಟುವುದು ಹೇಗೆ ಎನ್ನುವುದರ ಬಗ್ಗೆ ಚರ್ಚೆ ವಿಮರ್ಶೆಗಳಾಯಿತು. ಇದೆಲ್ಲಾ ಚರ್ಚೆಗಳ ರೂಪುರೇಖೆ ಪಡೆದು ಕಾನೂನಾಗಿ ಹೊರಹೊಮ್ಮಲು ವಿಮರ್ಶೆಗಳಾಯಿತು. ಇದಕ್ಕೆಲ್ಲಾ 18 ವರ್ಷಗಳ ಸುದೀರ್ಘ ಸಮಯವೇ ಹಿಡಿಯಿತು. ಸಂವಿಧಾನದ ತಿದ್ದುಪಡಿಯ ಮೂಲಕ 10ನೇ ಪರಿಚ್ಛೇಧವನ್ನು ಸೇರಿಸಲಾಯಿತು. ಸಂವಿಧಾನದ ಆರ್ಟಿಕಲ್ಸ್ 102 ಮತ್ತು 190ರಲ್ಲಿ ಸೂಕ್ತ ಬದಲಾವಣೆಗಳನ್ನು ಸೇರಿಸಲಾಯಿತು. ಸಂವಿಧಾನದ 10ನೇ ಪರಿಚ್ಛೇಧದಲ್ಲಿ ಇಂತಹ ಪಕ್ಷಾಂತರಿಗಳಿಗೆ ಯಾವ ರೀತಿಯ ಶಿಕ್ಷೆಯನ್ನು ನೀಡಬೇಕು, ಯಾವ ಸಂದರ್ಭದಲ್ಲಿ ಏನು ಕ್ರಮ ಕೈಗೊಳ್ಳಬೇಕು ಎಂಬುದು ನಿರ್ಧಿಷ್ಟಪಡಿಸಲಾಯಿತು. ಇದರ ಪ್ರಕಾರ ಪಕ್ಷಾಂತರ ಮಾಡುವ ಶಾಸಕರು ತಮ್ಮ ಶಾಸಕ ಪದವಿಯಿಂದ ಅನೂರ್ಜಿತಗೊಳ್ಳುತ್ತಾರೆಂದು ಸೂಚಿಸಲಾಯಿತು. ಹಾಗೆಯೇ ಶಾಸಕರು ಯಾವುದಾದರೂ ಹುದ್ದೆಯನ್ನು ತಮ್ಮ ಶಾಸಕ ಸ್ಥಾನದಿಂದ ಪಡೆದಿದ್ದರೆ ಅದರಿಂದಲೂ ಅನರ್ಹತೆಗೊಳಿಸಿ, ಅವರನ್ನು ಮಂತ್ರಿ ಪದವಿಯನ್ನೋ ಅಥವಾ ಇನ್ನಿತರೇ ಶಾಸಕಾಂಗ ಪದವಿಗಳಿಂದಲೋ ಅನೂರ್ಜಿತಗೊಳಿಸುವ ಅಧಿಕಾರವನ್ನು ನಮ್ಮ ಸಂವಿಧಾನದಲ್ಲಿ ಶಾಸನ ಸಭೆಯ ಸಭಾಪತಿ (ಸ್ಪೀಕರ್)ಗೆ ನೀಡಲಾಯಿತು. ಹಾಗೆಯೇ ಸಂಸತ್ತಿನಲ್ಲೂ ಸಂಸದರಾಗಿರುವ ವ್ಯಕ್ತಿಗಳು ಪಕ್ಷಾಂತರ ಅಪರಾಧ ಎಸಗಿದಲ್ಲಿ ಅವರನ್ನೂ ಸಹ ಅನೂರ್ಜಿತಗೊಳಿಸುವ ಅಧಿಕಾರ ಲೋಕಸಭೆ ಅಥವಾ ರಾಜ್ಯಸಭೆಯ ಸಭಾಪತಿಗೆ ನೀಡಲಾಗಿದೆ. ಇಲ್ಲಿ ಒಂದು ಸ್ವಾರಸ್ಯಕರ ಅಂಶವೆಂದರೆ ಶಾಸಕರನ್ನು ಅನರ್ಹತೆಗೊಳಿಸುವ ವಿಷಯದಲ್ಲಿ ಶಾಸಕಾಂಗ ಸಭೆಯ ಸಭಾಪತಿಯ ತೀರ್ಪೇ ಕೊನೆಯದೆಂದೂ, ಇದರ ಮಧ್ಯೆ ಪ್ರವೇಶಿಸುವುದಕ್ಕಾಗಲಿ, ಪರೀಕ್ಷೆಗೆ ಒಳಪಡಿಸುವುದಾಗಲಿ ಯಾವ ನ್ಯಾಯಾಲಯದ ವ್ಯಾಪ್ತಿಗೂ ಬರುವುದಿಲ್ಲವೆಂದು ಹೇಳಲಾಗಿದೆ. ಸಂವಿಧಾನದಲ್ಲಿ ಶಾಸಕರನ್ನು ಅನರ್ಹತೆ ಮಾಡುವ 10ನೇ ಪರಿಚ್ಛೇಧದಲ್ಲಿ ಹೊಸದಾಗಿ ಸೇರಿಸಲಾದ ವಿಷಯವನ್ನು ಸಂವಿಧಾನಕ್ಕೆ ವಿರೋಧವಾಗಿದೆ ಎಂದೂ ಮತ್ತು ಅಂತಹ ತೀರ್ಪನ್ನು ಪರೀಕ್ಷೆಗೆ ತೆಗೆದುಕೊಳ್ಳುವುದಿಲ್ಲ ಎಂಬ ವಿಷಯವನ್ನು ಪರಮೋಚ್ಛ ನ್ಯಾಯಾಲಯದ ಮುಂದೆ ಪ್ರಶ್ನಿಸಲಾಯಿತು. ಇದು ಶಾಸಕರ ಸ್ವಾತಂತ್ರ್ಯವನ್ನು, ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಅವರು ಮುಕ್ತರಾಗಿರುವುದಿಲ್ಲವೆಂದು ವಾಗ್ವಾದ ಮಾಡಲಾಯಿತು. ಇದನ್ನು ಒಂದು ಸಾರ್ವಜನಿಕ ಹಿತಾಸಕ್ತಿಯ ಕಟ್ಟಳೆ ಎಂಬುದಾಗಿ 1992ನೇ ಇಸವಿಯಲ್ಲಿ ದಾಖಲಿಸಲಾಯಿತು. ಕಿಹ್‌ತೋ ಹಾಲೋಹಾನ್–ವಿ–ಜಚಿಲ್ಲು ಮತ್ತು ಇತರರು ಎಂಬ ಕಟ್ಟಳೆಯಲ್ಲಿ ಪರಮೋಚ್ಛ ನ್ಯಾಯಾಲಯವು ಈ ಪ್ರಶ್ನೆಗಳನ್ನು ಪರಿಶೀಲಿಸಿ ಸಂವಿಧಾನಕ್ಕೆ 10ನೇ ಪರಿಚ್ಛೇಧವನ್ನು ಸೇರಿಸಿರುವ ಬದಲಾವಣೆ ಸಂವಿಧಾನಾತ್ಮಕವಾಗಿದೆ ಎಂದು ತೀರ್ಪಿತ್ತಿತು. ಆದರೆ, ಶಾಸಕಾಂಗ ಸಭೆಯ ಸಭಾಪತಿಯ ಅಪ್ಪಣೆ ಕೊನೆಯದಲ್ಲವೆಂದು ಇದನ್ನು ಉಚ್ಛ ನ್ಯಾಯಾಲಯಗಳು ಮತ್ತು ಪರಮೋಚ್ಛ ನ್ಯಾಯಾಲಯ ಆರ್ಟಿಕಲ್ಸ್ 226 ಮತ್ತು 32ರ ತಮ್ಮ ರಿಟ್ ವ್ಯಾಪ್ತಿಯೊಳಗೆ ಪರಿಶೀಲನೆ ಮಾಡಬಹುದೆಂದು ತೀರ್ಪಿತ್ತಿತು. ಇದಾದ ನಂತರ

ಅನೇಕ ಪ್ರಕರಣಗಳನ್ನು ಉಚ್ಚ ನ್ಯಾಯಾಲಯಗಳು ಮತ್ತು ಪರಮೋಚ್ಚ ನ್ಯಾಯಾಲಯವು ನಡೆಸಿ ಅನೇಕ ತೀರ್ಪುಗಳು ಹೊರಹೊಮ್ಮಿವೆ. ಈ ತೀರ್ಪುಗಳ ಪ್ರಕಾರ ಶಾಸಕಾಂಗ ಸಭೆಯ ಸಭಾಪತಿಯ ತೀರ್ಪು ಕೊನೆ ಮತ್ತು ಇತರ ನ್ಯಾಯಾಲಯಗಳು ಅದನ್ನು ಪರಿಶೀಲಿಸುವಂತಿಲ್ಲ. ಆದರೆ, ಉಚ್ಚ ನ್ಯಾಯಾಲಯಗಳು ಮತ್ತು ಪರಮೋಚ್ಚ ನ್ಯಾಯಾಲಯವು ತಮ್ಮ ರಿಟ್ ವ್ಯಾಪ್ತಿಯಲ್ಲಿ ಅದನ್ನು ಪರಿಶೀಲನೆಗೆ ಒಳಪಡಿಸಬಹುದು. ಶಾಸಕಾಂಗ ಸಭೆಯ ಸಭಾಪತಿಯ ತೀರ್ಪಿಗೆ ನಿರ್ದಿಷ್ಟ ಕಾಲವನ್ನು ನಿಗದಿಪಡಿಸುವಂತಿಲ್ಲ. ಆದರೆ, ಅವರು ಒಂದು ಸಮಂಜಸವಾದ ಸಮಯದೊಳಗೆ ತಮ್ಮ ತೀರ್ಪನ್ನು ತಿಳಿಯಪಡಿಸಬೇಕು. ಶಾಸಕಾಂಗ ಸಭೆಯ ಸಭಾಪತಿಯ ಮುಂದೆ ಯಾರಾದರೂ ಇತರೇ ಶಾಸಕರು ಅರ್ಜಿ ಸಲ್ಲಿಸಿದರೆ ಮಾತ್ರ ಅನರ್ಹತೆಯ ವಿಚಾರವನ್ನು ತೆಗೆದುಕೊಳ್ಳಬಹುದು. ಅನರ್ಹತೆಯ ಅವಧಿಯನ್ನು ನಿಗದಿಪಡಿಸುವಂತಿಲ್ಲ. ಅದು ಸಂವಿಧಾನ ಹೇಳಿದಂತೆ ಆಗಬೇಕು. ಆದರೆ ಪಕ್ಷಾಂತರ ಪಿಡುಗನ್ನು ತಪ್ಪಿಸಬೇಕೆಂದು ಅದನ್ನು ಅಪರಾಧವೆಂದು ಅನರ್ಹತೆಯನ್ನು ಉಂಟುಮಾಡುತ್ತದೆ ಎಂದು ತಿಳಿಸುವ ಸಂವಿಧಾನದ 10ನೇ ಪರಿಚ್ಛೇಧದ ಕಾನೂನು ಮತ್ತು ಈ ಅಧಿಕಾರವನ್ನು ಉಪಯೋಗಿಸಿಕೊಂಡು ಶಾಸಕಾಂಗ ಸಭೆಯ ಸಭಾಪತಿಗಳು ಶಾಸಕರನ್ನು ಅನರ್ಹತೆಗೊಳಿಸಿರುವ ಅಪ್ಪಣೆಗಳನ್ನು ಮಾಡಿದ್ಯಾಗ್ಯೂ ಮತ್ತು ಇಂತಹ ಅಪ್ಪಣೆಗಳನ್ನು ಉಚ್ಚ ನ್ಯಾಯಾಲಯ ಮತ್ತು ಪರಮೋಚ್ಚ ನ್ಯಾಯಾಲಯಗಳಲ್ಲಿ ಪ್ರಶ್ನಿಸಿದ್ದರೂ, ಅವುಗಳ ಮೇಲೆ ತೀರ್ಪುಗಳನ್ನು ನೀಡಿದ್ದರೂ, ಪಕ್ಷಾಂತರದ ಪಿಡುಗನ್ನೂ ಕಾನೂನಿನ ಮೂಲಕ ಪರಿಣಾಮಕಾರಿಯಾಗಿ ತಡೆಗಟ್ಟುವುದು ಸಾಧ್ಯವಾಗಿಲ್ಲ. ನೇರವಾಗಿ ಮಾಡಲಾಗದ ಪಕ್ಷಾಂತರವನ್ನು ಸುತ್ತು ಬಳಸು ದಾರಿಯಲ್ಲಿ ಬಂದು ಅದನ್ನು ಉಪಯೋಗಿಸಿ ಮತ್ತೆ ಅಧಿಕಾರವನ್ನು ಏರುತ್ತಿರುವ ನಮ್ಮ ಶಾಸಕರ ನಡೆಗಳು ಪಕ್ಷಾಂತರ ತಡೆಯ ಕಾನೂನಿನ ಒಂದು ವಿಡಂಬನೆಯೇ ಸರಿ. ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ನಡೆದ ರಾಜಕೀಯ ಬೆಳವಣಿಗೆಗಳನ್ನು ಅವಲೋಕಿಸಿದರೆ ಹೇಗೆ ಕಾಂಗ್ರೆಸ್ ಪಕ್ಷದ ಶಾಸಕರು ತಮ್ಮ ನಿಷ್ಠೆಯನ್ನು ಉಳಿಸಿಕೊಂಡರೂ ವಿಧಾನಸಭಾ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಆಡಳಿತ ಪಕ್ಷವು ಹೇಗೆ ಅಲ್ಪಸಂಖ್ಯಾತರ (ಮೈನಾರಿಟಿ) ಸ್ಥಾನಕ್ಕೆ ಇಳಿಯುವಂತೆ ಮಾಡಿ ಅದು ಅಧಿಕಾರವನ್ನು ಕಳೆದುಕೊಳ್ಳುವುದಕ್ಕೆ ಕಾರಣರಾದರು ಮತ್ತು ಈ ಬೆಳವಣಿಗೆಯಿಂದ ಬಹುಮತ ಇಲ್ಲದಿದ್ದರೂ ಬಿಜೆಪಿ ಪಕ್ಷದವರು ಬಹು ಹೆಚ್ಚು ಮತಗಳ ಏಕ ಪಕ್ಷವಾಗಿ ಹೊರಹೊಮ್ಮಿ, ಇಳುವರಿ ಸಂಖ್ಯೆಯ ಶಾಸನ ಸಭೆಯಲ್ಲಿ ತಮ್ಮ ಬಹುಮತವನ್ನು ಸ್ಥಾಪಿಸಿ ಅಧಿಕಾರಕ್ಕೆ ಬಂದಿದ್ದು, ಒಂದು ವಿಪರ್ಯಾಸವೇ ಸರಿ. ಇದೆಲ್ಲಾ ಬೇಳವಣಿಗೆಗಳ ಮುಕುಟಮಣಿಯಾಗಿ ರಾಜೀನಾಮೆ ಕೊಟ್ಟ ಶಾಸಕರು ಉಪ ಚುನಾವಣೆಗಳಲ್ಲಿ (ಬೈ–ಎಲೆಕ್ಷನ್) ಬಿಜೆಪಿ ಪಕ್ಷದ ಪರವಾಗಿ ಜಯ ಸಾಧಿಸಿ ಮತ್ತೊಮ್ಮೆ ಶಾಸಕಾಂಗ ಸಭೆಯನ್ನು ಪ್ರವೇಶಿಸಿ ಈಗ ಮಂತ್ರಿಗಳೂ ಆಗಿರುವುದು ವಿಪರ್ಯಾಸದ ಸಂಗತಿಯೇ ಸರಿ. ಈ ಬೆಳವಣಿಗೆ ನಮ್ಮ ಪಕ್ಷಾಂತರ ವಿರೋಧಿ ಕಾನೂನು ಹೇಗೆ ಪರಿಣಾಮಕಾರಿಯಾಗಿಲ್ಲ ಎಂಬ ಅಂಶವನ್ನು ನಿರೂಪಿಸುತ್ತದೆ.

ಲೇಖಕರು: ಡಿ.ವಿ.ಶೈಲೇಂದ್ರ ಕುಮಾರ್,
ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ,
ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ: 10.06.2020